**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ</u>**

**<u>ಸಿ.ಸಿ. ಸಂಖ್ಯೆ: 452/2025</u>**

ಫ್ರಾಸಾ – 4

ಚಾಸಾ – 1

**ಸಾಕ್ಷಿಯು ದಿಃ 12.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಸ್ವಾಮಿ |
| ತಂದೆಯ ಹೆಸರು | : | ಸಿದ್ದರಾಜು |
| ವಯಸ್ಸು | : | 45 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಭೀಮನಬಿಡು |

**<u>ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-</u>**

ಚಾಸಾ 2 ಮತ್ತು 3 ನನ್ನ ಮಗಳು, ಚಾಸಾ 4 ರಿಂದ 9 ಗೊತ್ತು. ಆರೋಪಿಗಳು ಗೊತ್ತು. ಆರೋಪಿಗಳು ನನ್ನ ದೂರ ಸಂಬಂದಿಕರು. ಸಾಕ್ಷಿಯು ದೂರಿನಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದರಿಂದ, ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ, ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರ್ತಿಸಲಾಯಿತು. ಸದರಿ ಸಹಿಗಳನ್ನು ಯಾವಾಗ ಎಲ್ಲಿ ಮಾಡಿದ್ದೇನೆ ನನಗೆ ಗೊತ್ತಿಲ್ಲ. ಆರೋಪಿಗಳ ವಿರುದ್ಧ ನಾನು ಯಾವುದೇ ದೂರು ನೀಡಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಆರೋಪಿಗಳು ನನಗೆ ಅಕ್ರಮ ಪ್ರತಿಬಂಧ ಉಂಟು ಮಾಡಿ, ಅವಾಚ್ಯ ಶಬ್ಧಗಳಿಂದ ಬೈದು, ಜೀವ ಬೆದರಿಕೆ ಹಾಕಿ ಗಾಯವನ್ನುಂಟು ಮಾಡಿರುವುದಿಲ್ಲ, ಕಾರ್ ನ ಗ್ಲಾಸ್ ನ್ನು ಜಖಮ್ ಗೊಳಿಸಿರುವುದಿಲ್ಲ ಮತ್ತು ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :– ಮಾನ್ಯ ಎಪಿಪಿಯವರಿಂದ :–**

ದಿಃ 11.04.2021 ರಂದು ಮಧ್ಯಾಹ್ನ 3.30 ರ ಸಮಯದಲ್ಲಿ ಭೀಮನಬಿಡು ಗ್ರಾಮದ ದೇವಸ್ಥಾನದ ಹತ್ತಿರ ಬಿದಿಗಳಿಗೆ ಹೋಗಲು ನೀರಿನ ಪೈಪ್ ಲೈನ್ ನ್ನು ಅಳವಡಿಸಿ ಅದಕ್ಕೆ ಗೇಟ್ ವಾಲ್ ಹಾಕುವ ವಿಚಾರದಲ್ಲಿ ನಾನು ಪ್ರಶ್ನಿಸಿದಕ್ಕೆ 1ನೇ ಆರೋಪಿಯು ನನ್ನನ್ನು ಅಡ್ಡಗಟ್ಟಿ ತಬ್ಬಿಕೊಂಡು, 2ನೇ ಆರೋಪಿ ನನಗೆ ಕಲ್ಲಿನಿಂದ ಹೊಡೆದಿದ್ದು ಬಿಡಿಸಲು ಬಂದು ಚಾಸಾ 2 ಮತ್ತು 3 ರವರಿಗೆ 1 ಮತ್ತು 2ನೇ ಆರೋಪಿಗಳು ಹಲ್ಲೆ ಮಾಡಿದ್ದು, 3 ಮತ್ತು 4ನೇ ಆರೋಪಿಗಳು ಸಹ ಹಲ್ಲೆ ಮಾಡಿದ್ದು, ನನಗೆ , ಚಾಸಾ 2 ರಿಂದ 3 ರವರಿಗೆ ಗಾಯಗೊಳಿಸಿ ನನಗೆ ಸೇರಿದ ಕೆಎಲ್–10–ಎಡಿ–3679 ಕಾರ್ ನ ಗ್ಲಾಸ್ ನ್ನು ಜಖಮ್ ಗೊಳಿಸಿರುತ್ತಾರೆ ಎಂದು ನಾನು ನಿಪಿ 1 ರಂತೆ ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ದೂರಿನ ವಿಚಾರವಾಗಿ ಪೊಲೀಸರು ದಿಃ 13.04.2021 ರಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ 4 ಮತ್ತು 5 ರ ಸಮಕ್ಷಮ ನಿಪಿ 2 ರಂತೆ ಬೆಳಿಗ್ಗೆ 10.15 ರಿಂದ 11.00 ವೇಳೆಯಲ್ಲಿ ಪಂಚನಾಮೆ ಮಾಡಿ ಹಿಡಿ ಗಾತ್ರದ ಕಲ್ಲನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಆರೋಪಿಗಳೊಂದಿಗೆ ಪ್ರಕರಣ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿ. ಆ ಕಾರಣನಿಂದ ನಿಪಿ 1 ಮತ್ತು 2 ರಲ್ಲಿರುವ ವಿಚಾರಗಳು ಗೊತ್ತಿದದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :– ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ